ISSN: 2249-894X IMPACT FACTOR : 5.2331(UIF) VOLUME - 6 | ISSUE - 12 | SEPTEMBER - 2017

REVIEW OF RESEARCH

# ವಚನ ಸಾಹಿತ್ಯದಲ್ಲಿ– ಲಿಂಗ ಸಮಾನತೆ

ಡಾ: ಪ್ರೇಮಲತ. ಹೆಚ್.ಎಸ್.
ಕನ್ನಡ ಸಹ ಪ್ರಾದ್ಯಾಪಕರು,
ಶ್ರೀ ಮಹದೇಶ್ವರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೊಳ್ಳೇಗಾಲ.



ಲಿಂಗಸಮಾನತೆ ಎನ್ನುವುದು ಜಗತ್ತಿನ ಸದಾಶಯಗಳಲ್ಲೊಂದು, ಶಾರೀರಿಕವಾಗಿ ಪುರುಷರಿಗಿಂತ ವಿಭಿನ್ನವಾಗಿರುವುದರಿಂದಲೇ ಸೃಷ್ಟಿಯ ಚಲನಶಿಲ ಮುನ್ನಡಿಗೆ ಕಾರಣವಾಗಿರುವ ಮಹಿಳೆ ಮಾನವ ಸಮಾಜದ ಅವಿಭಾಜ್ಯ ಅಂಗವಾಗಿದ್ದಾಳೆ. ಆಕೆ ಗರ್ಭಧಾರಣೆ, ಹೆರಿಗೆ, ತಾಯ್ತನದಂತಹ ತನ್ನ ವಿಶೇಷ ಸಾಮರ್ಥ್ಯದಿಂದ ಮಕ್ಕಳ ಲಾಲನೆ ಪಾಲನೆಯಂತಹ ಕೆಲಸಗಳ ಸಲುವಾಗಿ ಬಹಳ ಸಮಯ ಒಂದೆಡೆ ನಿಲ್ಲಬೇಕಾದ ಕಾರಣ ಗೃಹಕೇಂದ್ರಿತ ಜೀವನದಲ್ಲಿ ಬಂಧಿಯಾಗಿ ಹೊರಜಗತ್ತಿನ ಅನುಭವಗಳಿಗೆ ತೆರೆದುಕೊಳ್ಳುವ ಅವಕಾಶದಿಂದ ವಂಚಿತಳಾಗಿದ್ದಾಳೆ, ಈ ಮಿತಿಯನ್ನು ಮೀರಿದ ಪುರುಷ ಹೊರಪ್ರಪಂಚದ ತನ್ನ ಅನುಭವಗಳನ್ನು ವಿಸ್ತರಿಸಿಕೊಳ್ಳಲು ಸಾಧ್ಯವಾಗಿದೆ ಈ ಬೆಳವಣಿಗೆಯು ಮಹಿಳೆಯ ಕೀಳರಿಮೆಗೆ ಪುರುಷನ ಮೇಲರಿಮೆಗೆ ನಾಂದಿ ಹಾಡಿದುದು ಮಾತ್ರ ಆರೋಗ್ಯವಂತ ಸಮಾಜ ನಿರ್ಮಾಣದ ಕನಸಿಗೆ ತೊಡಕನ್ನುಂಟುಮಾಡಿದೆ.

ಬಾರತದ ಪುರುಷ ಪ್ರಧಾನ ಸಾಮಾಜಿಕ ವ್ಯವಸ್ಥೆಯಲ್ಲಿ ಕುಟುಂಬವೆಂಬ ಘಟಕವು ಶ್ರಮವಿಭಜನೆಯಾಸ್ನಾಧರಿಸಿದೆ. ಇಲ್ಲಿ ಗೃಹಕೃತ್ಯದ ಸಂಪೂರ್ಣ ಜವಾಬ್ದಾರಿಯು ಮಹಿಳೆಯ ಪಾಲಿನದಾಗಿರುತ್ತದೆ. ಮನೆಯ ಹೊರಗಿನ ದುಡಿಮೆ, ಹೆಂಡತಿ ಮಕ್ಕಳನ್ನು ಸಾಕುವ ಹೊಣೆಗಾರಿಗೆ ಪುರುಷನದಾಗಿರುತ್ತದೆ. ಈ ಕಾರಣದಿಂದಲೇ ಆರ್ಥಿಕ ಚಟುವಟಿಕೆಗಳ ಕೇಂದ್ರಬಿಂದುವಾಗಿ ಆತ ಸಮಾಜದ ಪ್ರಧಾನ ನೆಲೆಯಲ್ಲಿ ನಿಂತು ಗಮನ ಸೆಳೆಯಲು ಸಾಧ್ಯವಾಗಿದೆ. ಅವನ ಆಶ್ರಯಕ್ಕೆ ಬಂದ ಮಹಿಳೆ ಅಧೀನ ನೆಲೆಗೆ ಸರಿದು ಅಮುಖ್ಯವೆನಿಸಿದ್ದಾಳೆ. ಈ ಹಿನ್ನೆಲೆಯಲ್ಲಿ ಪುರುಷ ನಿರ್ವಹಿಸುವ ಕೆಲಸಗಳು ದುಡಿಮೆಯ ಅರ್ಥ ಪಡೆದರೆ ಮಹಿಳೆಯ ಕರ್ತವ್ಯಗಳು ಸೇವೆಯೆಂದು ಪರಿಗಣಿಸಲ್ಪಡುತ್ತವೆ. ನಮ್ಮ ಗ್ರಾಮೀಣ ಪರಿಸರದ ಕೃಷಿ ಆಧಾರಿತ ಕುಟುಂಬಗಳು ಕೂಡು ಕುಟುಂಬಗಳಾಗಿದ್ದು "ಕೂಡು ಕುಟುಂಬಗಳು ಸಾಮಾನ್ಯವಾಗಿ ಪುರುಷ ಪ್ರಧಾನವಾಗಿರುವುದರಿಂದ ಸ್ತ್ರೀಯರಿಗೆ ಸ್ವಾತಂತ್ರ್ಯ ಮತ್ತು ಸಮಾನತೆ ಇಲ್ಲ. ಅವರು ಪುರುಷರ ಹಿಂಸೆ ಮತ್ತು ಕಿರುಕುಳಕ್ಕೊಳಗಾಗುತ್ತಾರೆ. ಅವರ ಅಭಿಪ್ರಾಯಕ್ಕೆ ಮನ್ನಣೆ ಇರುವುದಿಲ್ಲ" ಹೀಗಾಗಿ ಕುಟುಂಬ, ಸಮಾಜ ಹಾಗೂ ಸಂಸ್ಕೃತಿ ಪುರುಷನಿಗೆ ಸರಿಸಮನಾಗಿ ತನ್ನನ್ನು ಕ್ರಿಯಾಶೀಲಳಾಗಿ ಗುರುತಿಸಿಕೊಂಡಿರುವ ಮಹಿಳೆ ಅಸಮಾನತೆಗೆ ಗುರಿಯಾಗುವುದರಿಂದ ಅನಾರೋಗ್ಯಕರ ಸಮಾಜ ನಿರ್ಮಾಣವಾಗುತ್ತದೆ.

ಪ್ರಾಚೀನ ಕಾಲದಿಂದಲೂ ನಮ್ಮ ಸಮಾಜದಲ್ಲಿ ಬೇರೂರಿರುವ ಹಲವು ಬಗೆಯ ಅಸಮಾನತೆಗಳಲ್ಲಿ ಲಿಂಗಾಧಾರಿತ ಅಸಮಾನತೆಯೂ ಒಂದು. ವೇದಗಳ ಕಾಲದಲ್ಲಿ ಮಹಿಳೆಯರಿಗಿದ್ದ ಸ್ಥಾನಮಾನಗಳು ಕಾಲಾನಂತರ ಕಡಿಮೆಯಾಗಿ ಆಕೆಯ ಬದುಕು ಸಂಕುಚಿತ ನೆಲೆಗೆ ಸರಿದಿರುವ ಸಂಗತಿಯು ಇತಿಹಾಸದ ಪುಟಗಳನ್ನು ತಿರುವಿ ಹಾಕಿದರೆ ಸ್ಪಷ್ಟಗೊಳ್ಳುತ್ತದೆ. ಸ್ಮೃತಿಗಳ ಕಾಲದಲ್ಲಿ ಹೆಣ್ಣಿನ ಬದುಕನ್ನು ದ್ವಂದ್ವ ನೆಲೆಯಲ್ಲಿಯೇ ಪರಿಭಾವಿಸಲಾಗಿದೆ. "ನಾರಿಯರನ್ನ ಗೌರವಿಸುವ ಎಡೆಯಲ್ಲಿ ದೇವತೆಗಳು ಸಂತುಷ್ಟರಾಗಿ ನೆಲೆಗೊಳ್ಳುತ್ತಾರೆ" ಎಂದು ಹೇಳುವ ಮನು ಮಹಾಶಯನೇ "ನ ಸ್ತ್ರೀ ಸ್ವಾತಂತ್ರ್ಯ ಮರ್ಹತಿ" ಎಂದು ಅಭಿಪ್ರಾಯ ಪಡುವುದು ಸ್ತ್ರೀ ಕುಲದ ಬಗೆಗಿನ ಸಂಕುಚಿತ ಮನೋಭಾವದ ದ್ಯೋತಕವಾಗಿದೆ. ಪುರುಷ ಪ್ರಧಾನ ಸಾಮಾಜಿಕ ವ್ಯವಸ್ಥೆಯ ಮೌಲ್ಯಗಳನ್ನು ಪ್ರತಿನಿಧಿಸುವ ನಮ್ಮ ಜನಪದರು "ಹೆಣ್ಣು ಹುಟ್ಟಿದರೆ ಹೆಗ್ಗಣ ಹುಟ್ಟಿದಂತೆ" ಎಂದು ಭಾವಿಸುವುದಂತೂ ಮಹಿಳಾ ಕುಲದ ಹಿನ್ನಡೆಯ ಸಂಕೇತವಾಗಿದೆ. ಪ್ರಾಚೀನ ಕಾಲದಿಂದಲೂ ವಿವಾಹ ಕೇಂದ್ರಿತ ನೆಲೆಯಲ್ಲಿಯೇ ಸ್ತ್ರೀಯರ ಜೀವನ ಸಾಗುತ್ತಿದ್ದು, ಕುಟುಂಬದ ಹಂತದಿಂದಲೇ ಆಕೆ ತಾರತಮ್ಯ ಭಾವನೆಗೆ ಒಳಗಾಗಿದ್ದಾಳೆ, ಮಗ ಹುಟ್ಟಿದರೆ ಓದು, ಉದ್ಯೋಗ ಅನಂತರ ಆತನ ಮದುವೆಯ ಬಗೆಗ ಆಲೋಚಿಸುವ ತಂದೆ ತಾಯಿಯರು ಹೆಣ್ಣು ಮಗು ಜನಿಸುತ್ತಿದ್ದಂತೆಯೇ ಮದುವೆಯ ಪೂರ್ವ ತಯಾರಿಗೆ

ಪೂರಕವಾಗಿ ಗೃಹಕೃತ್ಯದ ಶಿಕ್ಷಣ ನೀಡಲು ಪ್ರಾರಂಭಿಸುತ್ತಾರೆ. ಇಂತಹ ವಾತಾವರಣದಲ್ಲಿ ಸಹಜವಾಗಿಯೇ ಹೆಣ್ಣು ಹುಟ್ಟಿದರೆ ಮದುವೆಯ ಖರ್ಚು, ಇನ್ನೊಬ್ಬರ ಮನೆಗೆ ಸೇರಿಸುವ ಹೊಣೆಗಾರಿಕೆ ಈ ಕುರಿತ ಲೆಕ್ಕಾಚಾರದಲ್ಲಿಯೆ ಆಕೆಯ ಬದುಕು ಮುಂದುವರೆಯುತ್ತದೆ. ಕೊಟ್ಟ ಹೆಣ್ಣು ಕುಲಕ್ಕೆ ಹೊರಗು ಎಂದು ಹೆತ್ತವರು ಆಲೋಚಿಸುತ್ತಾರೆ. ಇಂತಹ ಸಾಂಪ್ರದಾಯಿಕ ಆಲೋಚನೆಗಳ ನಡುವೆಯೇ ಮಹಿಳೆಯರಿಗೆ ಸ್ವಾತಂತ್ರ್ಯ ಸಮಾನತೆಗಳನ್ನು ದೊರಕಿಸಿ ಆಕೆಯ ಬದುಕಿನಲ್ಲಿ ಉತ್ತಮ ಸಾಮಾಜಿಕ, ಧಾರ್ಮಿಕ ವಾತಾವರಣವನ್ನು ಕಲ್ಪಿಸುವ ಮೂಲಕ ಸಮಾಜದ ಮುಖ್ಯವಾಹಿನಿಗೆ ಅವಳನ್ನು ಕರೆತಂದ ಕೀರ್ತಿ ವಚನಕಾರರಿಗೆ ಸಲ್ಲುತ್ತದೆ.

ಕ್ರಿ.ಶ. 12 ನೇ ಶತಮಾನದಲ್ಲಿ ಬಸವ, ಅಲ್ಲಮ, ಮೊದಲಾದವರ ನೇತೃತ್ವದಲ್ಲಿ ಕನ್ನಡನಾಡಿನಲ್ಲಿ ನಡೆದ ಕ್ರಾಂತಿಯು ಯಾವುದೇ ಬಗೆಯ ಸಾಧನೆಗೆ ಹೆಣ್ಣು ಗಂಡು ಭೇದವಿಲ್ಲ ಎಂಬ ಸಂದೇಶವನ್ನು ಇಡೀ ಜಗತ್ತಿಗೆ ಸಾರಿರುವುದು ನಮ್ಮೆಲ್ಲರ ಪಾಲಿನ ಹೆಮ್ಮೆಯ ಸಂಗತಿಯಾಗಿದೆ. ಲಿಂಗಾಧಾರಿತ ಅಸಮಾನತೆಯನ್ನು ವಿರೋಧಿಸಿ ಮನೆಯಿಂದ ಹೊರಬಂದ ಬಸವಣ್ಣ, ತನ್ನ ಆಧ್ಯಾತ್ಮಿಕ ಸಾಧನೆಯ ಮೂಲಕ ಮಹಿಳಾ ಕುಲಕ್ಕೆ ಮಾದರಿಯಾಗಿ ನಿಂತಿರುವ ಅಕ್ಕಮಹಾದೇವಿ ಹಾಗೂ ಅನುಭವ ಮಂಟಪದ ಅಧ್ಯಕ್ಷನಾಗಿ ಶರಣರಿಗೆ ಜ್ಞಾನದ ಬೆಳಕು ತೋರಿದ ಅಲ್ಲಮಪ್ರಭು, ಚೆನ್ನಬಸವಣ್ಣ ಹೀಗೆ ಅನೇಕ ಶರಣರು ತಮ್ಮ ಸಾಧನೆಯ ಮೂಲಕ ಪ್ರಮುಖವಾಗಿ ಗಮನ ಸೆಳೆಯುತ್ತಾರೆ. ಇವರುಗಳಲ್ಲದೆ ಅಕ್ಕನಾಗಮ್ಮ, ಗಂಗಾಂಬಿಕೆ, ನೀಲಾಂಬಿಕೆ, ಆಯ್ದಕ್ಕಿ ಲಕ್ಕಮ್ಮ, ದುಗ್ಗಲೆ, ಸೂಳೆ ಸಂಕವ್ವ... ಹೇಗೆ ವಚನ ಪರಂಪರೆಯಲ್ಲಿ ಬೆಳಕಿಗೆ ಬಂದ ಹಲವು ಶರಣೆಯರ ಸಂಗತಿ ಲಿಂಗ ಸಮಾನತೆಯ ಆಶಯವನ್ನು ಮಾತ್ರವಲ್ಲದೆ ಆ ಶತಮಾನದ ಮೌಲ್ಯಗಳಾದ ಮಾನವೀಯ ಪ್ರೀತಿ, ಸಾಮಾಜಿಕ ಸಾಮರಸ್ಯ, ಪರಸ್ಪರ ಸೌಹಾರ್ದತೆ ಹಾಗೂ ಕಾಯಕದ ಹಿರಿಮೆ ಮೊದಲಾದವುಗಳನ್ನು ನಮ್ಮ ಗ್ರಹಿಕೆಗೆ ತಂದುಕೊಡುತ್ತದೆ. ಸುಮಾರು 700 ವರ್ಷಗಳ ಹಿಂದೆಯೇ ಸಮಾಜದ ಸಮಗ್ರ ಸಮಾನತೆಯನ್ನು ಸ್ಥಾಪಿಸಲು ಹೋರಾಡಿದ ಮಹಾನ್ ಸಾಧಕರಾಗಿ ಶಿವಶರಣರು ಗಮನ ಸೆಳೆಯುತ್ತಾರೆ. "ಮರಹಿಂಗೆ ಹಿರಿದು ಕಿರಿದುಂಟಲ್ಲದೇ ಅರಿವಿಂಗೆ ಹಿರಿದು ಕಿರಿದುಂಟೆ" ಎಂದು ಲಿಂಗಭೇದವೆಣಿಸಿದೆ ಮಹಿಳೆಯರಿಗೂ ಲಿಂಗ ದೀಕ್ಷೆ ಕೊಡುವುದರ ಮೂಲಕ ಬೌದ್ಧಿಕವಾಗಿ ಅವರು ಬೆಳೆಯಲು ಶಿವಶರಣರು ಅವಕಾಶ ಕಲ್ಪಿಸಿಕೊಟ್ಟದ್ದು **ಲಿಂಗಸಮಾನತೆ**ಯ ದ್ಯೋತಕವಾಗಿದೆ. ಹಾಗೆಯೇ ತಮಗೆ ದೊರೆತ ಸರಿಸಮಾನತೆಯ ಅವಕಾಶಗಳನ್ನು ಬಳಸಿಕೊಂಡವರಲ್ಲಿ ರಾಣಿಯರು ಸೇವಕಿಯರು, ಸಂಸಾರಿಗಳು, ವಿರಾಗಿಗಳು, ವೇಶ್ಯೆಯರು ಹಾಗೂ ವಿವಿಧ ವೃತ್ತಿಯನ್ನು ಅವಲಂಬಿಸಿ ಬದುಕುತ್ತಿದ್ದವರು ಅಂದು ಕಾಣಸಿಗುತ್ತಾರೆ.

ಈ ದಿಸೆಯಲ್ಲಿ ಶಾರೀರಿಕವಾಗಿ ಸ್ತ್ರೀ–ಪುರುಷರೆಂಬ ವ್ಯತ್ಯಾಸವೇ ಹೊರತು ಮಾನವರ ನಡುವೆ ಯಾವ ವ್ಯತ್ಯಾಸವೂ ಇಲ್ಲ ಎಂಬುದನ್ನು ಮನಗಾಣಿಸುವ ದೇವರ ದಾಸಿಮಯ್ಯನ ವಚನ ಹೀಗಿದೆ;

ಮೊಲೆ ಮೂಡಿ ಬಂದಡೆ ಹೆಣ್ಣೆಂಬರು
ಗಡ್ಡ ಮೀಸೆ ಬಂದಡೆ ಗಂಡೆಂಬರು
ನಡುವೆ ಸುಳಿಯುವ ಆತ್ಮನು
ಹೆಣ್ಣೂ ಅಲ್ಲ ಗಂಡೂ ಅಲ್ಲ ಕಾಣಾ! ರಾಮಾನಾಥ

ಎಂಬ ನುಡಿಗಳು ಶರಣರ ಅರಿವಿನ ಹಿರಿಮೆಯನ್ನು ನಮಗೆ ಪರಿಚಯಸುತ್ತವೆ. ಮಾನವ ಶರೀರವು ದೇಹ ಪ್ರಾಣಗಳ ಸಂಗಮ. ದೇಹಕ್ಕೆ ಕುರುಹು ಉಂಟೇ ಹೊರತು ಆತ್ಮಕ್ಕೆ ಯಾವ ಕುರುಹೂ ಇಲ್ಲ ಎಂಬುದನ್ನು ಆತನ ಇನ್ನೊಂದು ವಚನ ಈ ರೀತಿ ಪ್ರಕಟಪಡಿಸುತ್ತದೆ.

ಮಡದಿಯ ಪ್ರಾಣಕ್ಕೆ ಮೊಲೆ ಮುಡಿ ಇದ್ದಿತೆ?
ಒಡೆಯನ ಪ್ರಾಣಕ್ಕೆ ಇದ್ದೀತೆ ಯಜ್ಞೋಪವೀತ
ಕಡೆಯಲ್ಲಿದ್ದ ಅಂತ್ಯಜನು ಹಿಡಿದಿದ್ದನೆ ಹಿಡಿಗೋಲ?

ಸೃಷ್ಟಿಯ ಮುನ್ನೆಡೆಗೆ ಕಾರಣವಾಗಿರುವ ಸ್ತ್ರೀ ಪುರುಷರಿಬ್ಬರು ಒಂದೇ ನಾಣ್ಯದ ಎರಡು ಮುಖಗಳು. ಜಾತಿವ್ಯವಸ್ಥೆ ಎಂಬುದು ಸ್ವಾರ್ಥ ಸಮಾಜದ ಸೃಷ್ಟಿ. ಈ ಸತ್ಯವನ್ನರಿಯದೆ ಜಡ ಪ್ರವೃತ್ತಿಯ ಜನರು ಮಾಡಿಕೊಳ್ಳುವ ತೊಡಕು ಹಾಸ್ಯಾಸ್ಪದ ಎಂಬುದನ್ನು ಗಂಭೀರವಾದ ನೆಲೆಯಲ್ಲಿ ತಿಳಿಸುತ್ತದೆ.

ಶಿವಶರಣೆ ಗೊಗ್ಗವ್ವೆಯ ಒಂದು ವಚನವು ಈ ಅಭಿಪ್ರಾಯವನ್ನು ಪುಷ್ಟೀಕರಿಸುತ್ತದೆ. ಆಕೆಯ ವಚನವು ಹೀಗಿದೆ;

ಮೊಲೆ ಮೂಡಿಬಂದಡೆ ಹೆಣ್ಣೆಂಬರು
ಮೀಸೆ ಕಾಸೆ ಬಂದಡೆ ಗಂಡೆಂಬರು
ಈ ಉಭಯದ ಜ್ಞಾನ
ಹೆಣ್ಣೋ ಗಂಡೋ ನಾಸ್ತಿನಾಥ?

ಎಂಬುದು ಶಾರೀರಿಕ ಲಕ್ಷಣಗಳಿಂದ ಸ್ತ್ರೀ ಪುರುಷರು ವಿಭಿನ್ನವೇ ಹೊರತು ಜ್ಞಾನಕ್ಕೆ ಗಂಡು ಹೆಣ್ಣು ಭೇದವಿಲ್ಲ ಎಂಬ ನಿಜ ಸಂಗತಿಗೆ ಕನ್ನಡಿ ಹಿಡಿಯುತ್ತದೆ.

ಗಂಡಿನ ಸಾಧನೆಯ ಹಾದಿಯಲ್ಲಿ ಮಹಿಳೆಯ ಪಾತ್ರ ಹಿರಿದಾದರೂ ತಮ್ಮ ಸಾಧನೆಗೆ ಅವಳನ್ನು ಅಡ್ಡಿಯೆಂದು ಭಾವಿಸಿ ಮಾಯೆ ಎಂದು ಜರಿದವರೂ ಉಂಟು. ಈ ನೆಲದಲ್ಲಿನ ಸನಾತನ ಹಿಂದೂ ಧರ್ಮ, ಅನಂತರದ ಬೌದ್ಧ, ಜೈನ ಮೊದಲಾದವು ಕೂಡ ಈ ಪರಿಮಿತ ನೆಲೆಯಲ್ಲಿಯೇ ಮಹಿಳೆಯ ಬದುಕನ್ನು ಪರಿಭಾವಿಸಿವೆ. ಅಕ್ಕಮಹಾದೇವಿಯಂತಹ ಹಿರಿಯ ಸಾಧಕಿಯೂ ಕೂಡ ತನ್ನ ಸಾಧನೆಯ ಹಾದಿಯಲ್ಲಿ ಕಂಡುಕೊಂಡ ಸತ್ಯವನ್ನು ಕುರಿತು ಹೀಗೆ ನುಡಿದಿದ್ದಾಳೆ.

ಪುರುಷನ ಮುಂದೆ ಮಾಯೆ
ಸ್ತ್ರೀಯೆಂಬ ಅಭಿಮಾನವಾಗಿ ಕಾಡುವುದು
ಸ್ತ್ರೀಯ ಮುಂದೆ ಮಾಯೆ
ಪುರುಷನೆಂಬ ಅಭಿಮಾನವಾಗಿ ಕಾಡುವುದು
ಚೆನ್ನಮಲ್ಲಿಕಾರ್ಜುನನೊಲಿದ ಶರಣಂಗೆ
ಮಾಯೆಯಿಲ್ಲ ಮರಹಿಲ್ಲ ಅಭಿಮಾನವೂ ಇಲ್ಲ

ಹೀಗೆ ಹೇಳುವ ಮೂಲಕ ಪರಸ್ಪರ ಶಾರೀರಿಕ ಆಕರ್ಷಣೆಗಳು ಸಾಧನೆಗೆ ಅಡ್ಡಿಯಾದರೂ ಅದನ್ನು ಮೀರಿ ಬೆಳೆದವರಿಗೆ ಇದು ಯಾವುದೂ ಮುಖ್ಯ ತೊಡಕಲ್ಲ ಎಂಬುದನ್ನು ಅಕ್ಕ ತಿಳಿಯಪಡಿಸುತ್ತಾಳೆ. ಇನ್ನೂ ಮುಂದುವರೆದು;

ಹೆಣ್ಣಿಗೆ ಗಂಡು ಮಾಯೆ
ಗಂಡಿಗೆ ಹೆಣ್ಣು ಮಾಯೆ
ನಿಮ್ಮ ಮಾಯೆಗೆ ನಾನಂಜುವವಳಲ್ಲ

ಎಂಬ ದಿಟ್ಟತನ ತೋರುವುದಂತೂ ಆಕೆಯ ಆತ್ಮವಿಶ್ವಾಸದ ಪ್ರತೀಕವಾಗಿ ಗಮನ ಸೆಳೆಯುತ್ತದೆ. ಈ ಎಲ್ಲ ಬಗೆಯ ದ್ವಂದ್ವಗಳನ್ನು ಮೀರಿ ನಿಂತ ಅಲ್ಲಮ ಪ್ರಭುವಿನ ನಿಲುವು ಈ ರೀತಿಯಾಗಿದೆ.

ಹೊನ್ನು ಮಾಯೆ ಎಂಬರು ಹೊನ್ನು ಮಾಯೆ ಅಲ್ಲ
ಹೆಣ್ಣು ಮಾಯೆ ಎಂಬರು ಹೆಣ್ಣು ಮಾಯೆ ಅಲ್ಲ
ಮಣ್ಣು ಮಾಯೆ ಎಂಬರು ಮಣ್ಣು ಮಾಯೆ ಅಲ್ಲ
ಮನದ ಮುಂದಣ ಆಸೆಯೇ ಮಾಯೆ ಕಾಣಾ ಗುಹೇಶ್ವರಾ

ಈ ನೆಲೆಯಲ್ಲಿ ಲೌಕಿಕ ಆಕರ್ಷಣೆಗಳನ್ನು ಮೀರಿ ಬೆಳೆದ ಸಾಧಕನ ಅಚಲ ಮನೋಭಾವವು ವ್ಯಕ್ತಗೊಂಡಿದೆ.

ಪ್ರತಿ ಯಶಸ್ವಿ ಪುರುಷರ ಹಿಂದೆ ಇರುವ ಮಮಹಿಳೆಯರ ಹಾಗೂ ಯಶಸ್ವಿ ಮಹಿಳೆಯರ ಹಿಂದೆ ಇರುವ ಪುರುಷರ ಪಾತ್ರವನ್ನು ನಾವು ಅಲ್ಲಗಳೆಯುವಂತಿಲ್ಲ. ಸಾಧನೆಗೆ ಸಾಂಸಾರಿಕ ಬದುಕು ಎಂದೂ ಅಡ್ಡಿಯಲ್ಲ ಎಂಬುವುದರ ಜೊತೆಗೆ ನಮ್ಮ ಸಮಾಜ ಹಿಂದಿನಿಂದಲೂ ಮಹಿಳೆಯರಿಗೆ ಮಾತ್ರ ಆರೋಪಿಸಿರುವ ಶೀಲ, ಸಚ್ಚಾರಿತ್ರ್ಯವೆಂಬ ಮೌಲ್ಯಗಳು ಪುರುಷರಿಗೂ ಮುಖ್ಯ ಎನ್ನವಂತಹ ಉದಾತ್ತ ಚಿಂತನೆಯನ್ನು ಬಸವಣ್ಣ ಹಾಗೂ ಜೇಡರ ದಾಸಿಮಯ್ಯನವರ ವಚನಗಳು ಹೀಗೆ ಪ್ರಸ್ತುತಪಡಿಸುತ್ತವೆ;

ಸತಿಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ
ಸತಿಪತಿಗಳೊಂದಾಗದವನ ಭಕ್ತಿ
ಅಮೃತದೊಳು ವಿಷ ಬೆರೆದಂತೆ ಕಾಣಾ! ರಾಮನಾಥ

ಎನ್ನುವ ಜೇಡರದಾಸಿಮಯ್ಯನವರ ಮಾತುಗಳಿಗೆ ಪೂರಕವಾಗಿ ಬಸವಣ್ಣನವರ ಮಾತುಗಳನ್ನು ಇಲ್ಲಿ ಗ್ರಹಿಸಬಹುದು;

ಪರವಧುವನು ಮಹಾದೇವಿಯೆಂಬೆ
ಪುಳಿವಿಡಿದು ಘೃತವಕಾಂಬಂತೆ ಅಕ್ಷರವಿಡಿದು ವಿದ್ಯೆಯನರಿವಂತೆ
ಅನ್ನವಕೊಂಡು ಚೈತನ್ಯವ ಪಡೆವಂತೆ ಸತಿವಿಡಿದು ನಿರ್ವಾಣ

ಸತಿಯ ಗಳಿಸಿಕೊಂಬುದು..... ಎನ್ನುವಲ್ಲಿ ಮುಕ್ತಿ ಮಾರ್ಗಕ್ಕೂ ಕೂಡ ಸತಿಯ ಸಹಕಾರ, ಸಹಭಾಗಿತ್ವಗಳು ಅಗತ್ಯವೆನ್ನುವುದನ್ನು ದೃಢಪಡಿಸುತ್ತವೆ. ಈ ನೆಲೆಯನ್ನು ಮೀರಿ ಮುಂದುವರೆದು ಕರ್ಮಯೋಗಿ ಸಿದ್ಧರಾಮನು ಮಹಿಳೆಯನ್ನು ಸಾಕ್ಷಾತ್ ದೇವತೆಯೆಂದು ಮನದುಂಬಿ ಹಾಡಿದ್ದಾನೆ.

"ಹೆಣ್ಣು ಹೆಣ್ಣಲ್ಲ ಹೆಣ್ಣು ರಕ್ಕಸಿಯಲ್ಲ ಹೆಣ್ಣು ಪ್ರತ್ಯಕ್ಷ
ಕಪಿಲ ಸಿದ್ಧ ಮಲ್ಲಿಕಾರ್ಜುನ ನೋಡಾ"

ಎಂಬ ಆತನ ಅಭಿಪ್ರಾಯವು ಸ್ತ್ರೀ ಕುಲದ ಬಗೆಗೆ ಇರುವ ಪುರುಷ ಜಗತ್ತಿನ ಪೂರ್ವಾಗ್ರಹ ಪೀಡಿತ ಮನೋಭಾವವನ್ನು ತೊಲಗಿಸುವಂತಿದೆ. ಇದಕ್ಕೆ ವಿಭಿನ್ನವಾಗಿ ಮಹಿಳೆಯರನ್ನು ಕುರಿತು ಪುರುಷ ಪ್ರಧಾನ ಸಮಾಜದ ಪಕ್ಷಪಾತ ಧೋರಣೆಯನ್ನು ಗೊಗ್ಗವ್ವೆ ಹೀಗೆ ಖಂಡಿಸಿರುವುದನ್ನು ಗಮನಿಸಬಹುದು.

ಗಂಡು ಮೋಹಿಸಿ ಹೆಣ್ಣ ಹಿಡಿದಡೆ
ಅದು ಗಂಡಿನ ಒಡವೆಯೆಂದು ಅರಿಯಬೇಕು
ಹೆಣ್ಣ ಮೋಹಿಸಿ ಗಂಡ ಹಿಡಿದೆಡೆ
ಉತ್ತರವಾವುದೆಂದರಿಯಬೇಕು
ಎರಡರ ಉಭಯವ ಕಳೆದು ಸುಖ ತಾನಾಗಬಲ್ಲಡೆ
ನಾಸ್ತಿನಾಥನು ಪರಿಪೂರ್ಣನೆಂಬೆ

ಈ ಮನೋಭಾವದಲ್ಲಿ ಹೆಣ್ಣಿಗೊಂದು ನೀತಿ ಗಂಡಿಗೊಂದು ರೀತಿಯನ್ನು ಹೇರಿರುವ ಭಾರತೀಯ ಸಮಾಜದ ಅವಹೇಳನವಿದೆ. ಮಾನವ ಬದುಕಿನ ಪರಿಪೂರ್ಣತೆಗೆ ಬೇಕಾದ ಅರಿವನ್ನು ಕುರಿತ ಗಂಭೀರವಾದ ಆಲೋಚನೆಯಿದೆ. ಲಿಂಗಸಮಾನತೆಯ ಸ್ಪಷ್ಟಹೊಳಹು ಇಲ್ಲಿ ಕಾಣಸಿಗುತ್ತದೆ.

ಹಲವು ವಚನಕಾರ್ತಿಯರು ಸ್ವಾತಂತ್ರ್ಯ ಸಮಾನತೆಯ ತಿಳಿವಿನಲ್ಲಿ ತಮ್ಮ ಗಂಡಂದಿರ ಹಾದಿಯನ್ನು ಸೂಕ್ತ ಮಾರ್ಗದರ್ಶನಗೈದು ತಿದ್ದಿದ ಸಂದರ್ಭಗಳು ವಚನ ಸಾಹಿತ್ಯದಲ್ಲಿ ದೊರೆಯುತ್ತವೆ. "ಈಸಕ್ಕಿಯಾಸೆ ನಿಮಗೇಕಯ್ಯ" ಎಂಬ ಆಯ್ದಕ್ಕಿ ಲಕ್ಕಮ್ಮನ ಮಾತುಗಳು ಇಲ್ಲಿ ಅರ್ಥಪಡೆಯುತ್ತವೆ. ಸಮಾಜದಲ್ಲಿ ಸರಿಯಾದ ಅವಕಾಶಗಳು ಒದಗಿದರೆ ಸಾಮಾಜಿಕ, ಆರ್ಥಿಕ, ಧಾರ್ಮಿಕ ಹಾಗೂ ಬೌದ್ಧಿಕವಾಗಿ ತಾನು ಯಾರಿಗೂ ಕಡಿಮೆಯಿಲ್ಲವೆಂಬುದನ್ನು, ಪುರುಷರಿಗೆ ಸರಿಸಮವಾಗಿ ಬೆಳೆಯುವ ಸಾಧ್ಯತೆಗಳನ್ನು ಸುಮಾರು ಏಳೆಂಟು ಶತಮಾನಗಳ ಹಿಂದೆಯೇ ಮಹಿಳೆ ನಿರೂಪಿಸಿದ್ದಾಳೆ.

ಇಂದಿನ ದಿನಮಾನ ಹಾಗೂ ಕಾಲಮಾನಗಳಲ್ಲಿ ಮಹಿಳೆಯರು ಶಿಕ್ಷಣ ಉದ್ಯೋಗಗಳ ಸಲುವಾಗಿ ಹೊರಜಗತ್ತಿಗೆ ಪ್ರವೇಶಮಾಡಿ ಸಮಾಜದ ಎಲ್ಲ ಕ್ಷೇತ್ರಗಳಲ್ಲೂ ತಮ್ಮ ಸಾಧನೆಯ ಛಾಪು ಮೂಡಿಸಿದ್ದಾರೆ. ಆದಾಗ್ಯೂ ಮಹಿಳೆಯರನ್ನು ಶಾರೀರಿಕವಾಗಿ ಕೀಳೆಂದು ಭಾವಿಸುವ ವಿದ್ಯಾವಂತ ಪುರುಷ ಮನಸ್ಸುಗಳು ಇನ್ನೂ ನಮ್ಮ ನಡುವೆ ಇರುವುದು ವಿಪರ್ಯಾಸವೆನಿಸುತ್ತದೆ.

"ಘನತೆಯಿಂದ ಬಾಳುವ ಎಲ್ಲ ಸ್ವಾತಂತ್ರ್ಯ ಮಹಿಳೆಗಿದೆ
ಸ್ತ್ರೀಯರಿಗೆ ಪುರುಷರಿಗಿರುವಷ್ಟೇ ಹಕ್ಕುಗಳಿವೆ
ನೆಮ್ಮದಿಯಿಂದ ಬಾಳಿ ನೆಮ್ಮದಿಯಿಂದ ಬಾಳಲುಬಿಡಿ
ಹೆಣ್ಣು ಅಬಲೆಯಲ್ಲ ಸಬಲೆ" -2

ಲಿಂಗಸಮಾನತೆಯಂತಹ ಆಶಯವನ್ನು ಸಾಧಿಸಲು ಪುರುಷ ಜಗತ್ತಿನ ಪರಸ್ಪರ ಪ್ರೀತಿ, ವಿಶ್ವಾಸ ಹಾಗೂ ಮಹಿಳೆಯರನ್ನು ಕುರಿತ ಉದಾತ್ತ ಆಲೋಚನೆಗಳು ಇಂದು ಅತಿ ಅವಶ್ಯಕವಾಗಿದೆ. ಹಾಗಾದಾಗ ಮಾತ್ರ ಸಮಾನತೆಯಂತಹ ಪರಿಕಲ್ಪನೆಗಳು ಸಾಕಾರಗೊಳ್ಳಲು ಸಾಧ್ಯವಾಗುತ್ತದೆ. ಮಾತ್ರವಲ್ಲ ಆರೋಗ್ಯವಂತ ಸಮಸಮಾಜದ ಕನಸು ನನಸಾಗುತ್ತದೆ ಎಂಬುವುದರಲ್ಲಿ ಸಂಶಯವಿಲ್ಲ.

## ಪರಾಮರ್ಶನ ಗ್ರಂಥಗಳು;

1. ಡಾ. ಕವಿತಾ ರೈ; ಮಹಿಳೆ ಅಸ್ತಿತ್ವದ ಸಂಕಥನ, ಪುಟ 70, ಪ್ರಗತಿ ಗ್ರಾಫಿಕ್ಸ್, ಬೆಂಗಳೂರು.
2. ಡಾ. ಹಾಲತಿ ಸೋಮಶೇಖರ; ಸ್ತ್ರೀ ಪರ, ಪುಟ–21, ವಿಸ್ಮಯ ಪ್ರಕಾಶನ ಮೈಸೂರು –2008
3. ಡಾ: ಎಚ್.ಎಲ್. ಪುಷ್ಪ; ಸ್ತ್ರೀ ಎಂದರೆ ಅಷ್ಟೇ ಸಾಕೆ, ಯಾಜಿ ಪ್ರಕಾಶನ, ಹೊಸಪೇಟೆ 2015

4. ಡಾ: ರಾಜಶೇಖರ ಜಮದಂಡಿ; ವಚನ ಪರಿಮಳ, ಬಸವ ಪ್ರಕಾಶನ, ಬಳ್ಳಾರಿ, 2008